ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 22ನೇ ಸೆಪ್ಟಂಬರ್, 2020

ಜೋಯಿಡಾ ತಾಲ್ಲೂಕಿನ ರಾಮನಗರ ನಿರಾಶ್ರಿತರಿಗೆ ಉಸುಕು ತೆಗೆಯಲು ಸಂಬಂಧಿಸಿದ ಆಡಳಿತ ತೊಂದರೆ ಮಾಡುತ್ತಿರುವ ಬಗ್ಗೆ

ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

166 (168) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ರಾಮನಗರದಲ್ಲಿ ಸೂಫಾಡ್ಯಾ ಮ್ ನಿರ್ಮಾಣಕ್ಕಾಗಿ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿ ಕೊಂಡ ಹಿನ್ನೆಲೆಯಲ್ಲಿ ಸದರಿ ಭೂಮಿ ತ್ಯಾಗ ಮಾಡಿದ ನಿರಾಶ್ರಿತರು ಯಾವುದೇ ಉದ್ಯೋಗವಿಲ್ಲದೇ ತಮ್ಮ ಜೀವನ ನಿರ್ವಹಣೆಗೆ ಸಾಲ ಮಾಡಿ ವಾಹನ ತೆಗೆದುಕೊಂಡು ಅಲ್ಲಿಯೇ ಸುತ್ತಮುತ್ತಲಿನ ನದಿ ಪಾತ್ರದಲ್ಲಿ ಮಳೆಗಾಲದಲ್ಲಿ ಬಂದು ಬಿದ್ದಿರುವ ಉಸುಕನ್ನು ತೆಗೆದು ರಫ್ತು ಮಾಡಿ ತಮ್ಮ ಉಪ ಜೀವನ ಸಾಗಿಸುತ್ತಿದ್ದು, ಸಂಬಂಧಿಸಿದ ಇಲಾಖೆಯವರು ಅವರಿಗೆ ತೊಂದರೆ ಮಾಡಿರುವುದರಿಂದ ಸಮಸ್ತ ರಾಮನಗರ ನಿರಾಶ್ರಿತರು ಉಗ್ರ ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಇವರಿಗೆ ಸದರಿ ಮಳೆಗಾಲದಲ್ಲಿ ನದಿ ಪಾತ್ರದಲ್ಲಿ ಬಂದು ಬಿದ್ದಿರುವ ಉಸುಕನ್ನು ರಫ್ತು ಪಡಿಸಿಕೊಳ್ಳಲು ಸರ್ಕಾರದ ನಿಯಮದ ಪ್ರಕಾರ ಅವಕಾಶ ಮಾಡಿಕೊಡಲಾಗುವುದೇ; (ವಿವರ ನೀಡುವುದು)

(ಇ) ಈಗಾಗಲೇ ಜೋಯಿಡಾ ತಾಲ್ಲೂಕಿನ ರಾಮನಗರ ಭಾಗದ ಪಾಂಡರಿ ನದಿಯ ಬೆಳಗಾವಿಯ ಲೋಂಡಾ ಭಾಗದ ಪ್ರದೇಶದಲ್ಲಿ ಉಸುಕು ತೆಗೆಯಲು ಸರ್ಕಾರ ಅನುಮತಿ ನೀಡಿದ್ದು, 3 ಕಿಲೋ ಮೀಟರ್ ಪಕ್ಕದ ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ರಾಮನಗರ ನದಿಯ ಪಾತ್ರದ ಭಾಗದಲ್ಲೂ ಉಸುಕು ತೆಗೆಯಲು ಸಂಬಂಧಿಸಿದ ಇಲಾಖೆ ತೊಂದರೆ ಮಾಡುತ್ತಿದ್ದು, ಈ ಬಗ್ಗೆ ಸರ್ಕಾರ ಕೂಡಲೇ ಸಂಬಂಧಿಸಿದ ನಿರಾಶ್ರಿತರಿಗೆ ನಿಯಮದಂತೆ ಉಸುಕು ರಫ್ತು ಪಡಿಸಲು ಅವಕಾಶ ಮಾಡಿಕೊಡುವುದೇ? (ವಿವರ ನೀಡುವುದು)